

ಸರೀಸೃಪಗಳು ಇವೆಲ್ಲವನ್ನೂ ತೆರೆದ ಕಣ್ಣಿನಿಂದ ಗಮನಿಸಿ. ಸೀಬೆಗಿಡದ ಮೇಲಿನ ಅಳಿಲು, ಪುಕ್ಕ ಒಣಗಿಸುವ ನೀರು ಕಾಗೆ, ಕಲ್ಲಿನ ಸಂದಿಯ ಏಡಿ, ಮುಟ್ಟಿದರೆ ಉಂಡೆಯಾಗುವ ಅಡಕೆ ಹುಳ, ಕೆಸರಿನ ಪಕ್ಕದ ಕಪ್ಪೆ, ಸಮೀಪಿಸಿದರೆ ಹಾರುವ ಚಿಟ್ಟೆ, ಬಿಸಿಲು ಕಾಯಿಸುವ ಆಮೆ, ಮುಟ್ಟಿದರೆ ಮುನಿಯುವ ಮಿಮೋಸಾ ಪುಡಿಕಾ, ಗಾಳಿಗೆ ತೊನೆದಾಡುವ ವೃಕ್ಷಗಳು, ಬಿದ್ದಲ್ಲೇ ಕುಂಬಾಗುತ್ತಿರುವ ಮಹಾಮರಗಳು, ಸದ್ದಿಲ್ಲದೇ ಎದ್ದು ನಿಲ್ಲುವ ಅಣಬೆಗಳು– ಇವೆಲ್ಲವೂ ಸೇರಿ ನಮ್ಮ ಕಾಡುಗಳು ರೂಪುಗೊಂಡಿವೆ.

ಭೂಮಿಯ ನಿರಂತರ ಚಲನೆಗೂ, ನಾವು ಉಸಿರಾಡುವ ಗಾಳಿಗೂ, ಹವಾಮಾನ ಬದಲಾವಣೆಗೂ, ಬೆಟ್ಟಗುಡ್ಡಗಳ ಆಕಾರಕ್ಕೂ, ಉಕ್ಕುವ ಸಮುದ್ರಕ್ಕೂ, ಚೆಲ್ಲಾಡಿ ಹರಡಿರುವ ಮರುಭೂಮಿಗೂ, ನಿರ್ಲಿಪ್ತವಾಗಿರುವ ಹಿಮ ಪ್ರದೇಶಕ್ಕೂ, ನದಿ–ತೊರೆಗಳು ಹರಿಯುವ ದಿಕ್ಕು–ವೇಗಕ್ಕೂ, ನೀರಿನ ಮೂಲಗಳನ್ನು ಆಧರಿಸಿ ನಭದೆತ್ತರಕ್ಕೆ ನಿಂತಿರುವ ವೃಕ್ಷ ಸಂಪತ್ತಿಗೂ, ಹಸಿರಿನ ಆಶ್ರಯದಲ್ಲಿ ನೆಲೆ ನಿಂತಿರುವ ಸೂಕ್ಷ್ಮ ಜೀವಿಗಳಿಂದ ಹಿಡಿದು, ಬೃಹದಾಕಾರದ ಪ್ರಾಣಿಗಳವರೆಗೂ ಇರುವ ಪರಸ್ಪರ ಸಂಬಂಧ, ಮಿಳಿತಗಳು ಹೇಗಿವೆಯೆಂದರೆ, ಇವುಗಳಲ್ಲಿ ಯಾವುದಾದರೊಂದರಲ್ಲಿ ಸೂಕ್ಷ್ಮ ಬದಲಾವಣೆಯಾದರೂ, ಉಳಿದ ಎಲ್ಲದರಲ್ಲಿ ಪೂರಕ ವಿಪ್ಲವಗಳು ಸಂಭವಿಸುತ್ತವೆ.

ನಿಮ್ಮ ಎದುರಲ್ಲಿರುವ ಗಿಡಕ್ಕೆ ಹಸಿರು ಬಣ್ಣ ಬರಲು ಕಾರಣ ಮಣ್ಣಿನಲ್ಲಿದೆಯೋ? ಅದು ನೀರಿನಿಂದ ಬಂತೋ? ಬೀಜದ ಪ್ರಭಾವವೋ? ವಾತಾವರಣವೋ? ಸೂರ್ಯನ ಬೆಳಕೋ? ಯಾವುದೇ ನಿರ್ದಿಷ್ಟ ಕಾರಣವನ್ನು ನೀಡಲು ಸಾಧ್ಯವಿಲ್ಲ. ಪ್ರತಿಯೊಂದಕ್ಕೂ ಪ್ರತಿಯೊಂದೂ ಕಾರಣವಾಗಿದೆ. ಕ್ರಿಯೆಯಿಲ್ಲದೆ ಪ್ರವಾಹವಿಲ್ಲ, ಚಲನೆಯಿಲ್ಲದೇ ಜೀವವಿಲ್ಲ, ಜೀವವಿಲ್ಲದೇ ಚೈತನ್ಯವಿಲ್ಲ, ಚೈತನ್ಯವಿಲ್ಲದೇ ಪ್ರಕ್ರಿಯೆಯಿಲ್ಲ.



ಆದರೆ ನಮ್ಮ ಕಾಡುಗಳನ್ನು ನಾವು ಹೇಗೆ ನೋಡುತ್ತಿದ್ದೇವೆ? ನಮಗೆ ಅವು ಆದಾಯ ತರುವ ಸೊತ್ತುಗಳಷ್ಟೇ ಎಂದು ಪರಿಗಣಿಸುತ್ತಿದ್ದೇವೆಯೆ? ಅನಗತ್ಯ ರಸ್ತೆಗಳು, ವಿವೇಚನಾರಹಿತ ಜಲವಿದ್ಯುತ್ ಯೋಜನೆಗಳು, ಪರಿಸರ ಪ್ರವಾಸೋದ್ಯಮದ ಹೆಸರಿನಲ್ಲಿ ನಡೆಯುತ್ತಿರುವ ಖಾಸಗಿಯವರ ಬಂಡವಾಳ ಹೂಡಿಕೆ– ಇವೆಲ್ಲ ಏನನ್ನು ಹೇಳುತ್ತಿವೆ? ಹತ್ತಾರು ನದಿಗಳಿಗೆ ಉಗಮ ಸ್ಥಾನವಾದ ಪಶ್ಚಿಮ ಘಟ್ಟಗಳದ್ದು ಅಪರೂಪದ ಜೀವವೈವಿಧ್ಯ. ಇಲ್ಲಿರುವ ಇರುವೆ, ಗೆದ್ದಲು, ಹುಲ್ಲು, ಪೊಟರೆಯೊಳಗಿನ ಹಕ್ಕಿ, ಧರೆಗುರುಳಿದ ಮರ, ಕಲ್ಲು ಇವೆಲ್ಲವಕ್ಕೂ ಅವುಗಳದೇ ಆದ ಜೈವಿಕ ಮಹತ್ವ ಇದೆ. ಕಾಡಿನಲ್ಲಿ ನಮ್ಮ ಯಾವುದೇ ರೀತಿಯ ಹಸ್ತಕ್ಷೇಪ ದೊಡ್ಡ ಜೈವಿಕ ದುರಂತಕ್ಕೆ ಕಾರಣವಾಗುತ್ತದೆ. ಅರಣ್ಯವನ್ನು ನಮ್ಮ ಸರಕಾರಗಳು ಎಟಿಎಂ ಎಂದು ಭಾವಿಸಿರುವಂತಿದೆ. ಕಾಡಿನೊಳಗೆ ರಸ್ತೆ, ಜಲವಿದ್ಯುತ್, ಗಣಿಗಾರಿಕೆ, ತೈಲಸಾಗಣೆ, ಕೃಷಿಗಾಗಿ ಭೂಮಿ ಒತ್ತುವರಿ, ಸರ್ಕಾರೀ ಯೋಜನೆಗಳ ಹೆಸರಿನಲ್ಲಿ ಪರಿಸರ ನಾಶ ಎಲ್ಲವೂ ಧಾರಾಳವಾಗಿ ನಡೆಯುತ್ತಿವೆ. ಜೈವಿಕ ಪರಿಸರ, ಪರಿಸರ ವಿಜ್ಞಾನ, ಮಾಲಿನ್ಯ ನಿಯಂತ್ರಣ, ಅರಣ್ಯ ಸಂರಕ್ಷಣೆ ಮುಂತಾದುವುಗಳ ಬಗ್ಗೆ ನಮ್ಮಲ್ಲಿ ತಳಮಟ್ಟದ ಚರ್ಚೆ ಆಗುತ್ತಿಲ್ಲ. ನಮಗೆ ತಕ್ಷಣದ ಲಾಭವಷ್ಟೇ ಮುಖ್ಯ.

ಪಶ್ಚಿಮ ಘಟ್ಟವನ್ನು ಕಾಪಾಡುವತ್ತ ನಾವು ತುರ್ತಾಗಿ ಗಮನ ಹರಿಸಬೇಕಿದೆ. ತಿಳುವಳಿಕೆಯುಳ್ಳ ನಾಗರಿಕರನ್ನು ಒಳಗೊಂಡ ಜೈವಿಕ ಪರಿಸರ ರಕ್ಷಣಾ ತಂಡಗಳನ್ನು ತಾಲ್ಲೂಕುವಾರು ರಚಿಸುವುದು ಇಂದಿನ ಅಗತ್ಯವಾಗಿದೆ. ಈ ಕಾಡನ್ನು ಪುನಃ ಸೃಷ್ಟಿಸಲು ನಮಗೆ ಸಾಧ್ಯವಿಲ್ಲ ಎನ್ನುವುದನ್ನು ಮತ್ತೆ ಮತ್ತೆ ನಮಗೇ ಹೇಳಿಕೊಳ್ಳಬೇಕಿದೆ. ರಸ್ತೆ, ಜಲವಿದ್ಯುತ್, ಗಣಿಗಾರಿಕೆ, ತೈಲಸಾಗಣೆ, ಕೃಷಿಗಾಗಿ ಭೂಮಿ ಒತ್ತುವರಿ ಮುಂತಾಗಿ ಪಶ್ಚಿಮ ಘಟ್ಟದ ಕಾಡುಗಳಲ್ಲಿ ವಿವಿಧ ಯೋಜನೆಗಳ ಹೆಸರಿನಲ್ಲಿ ಪರಿಸರದ ಮೇಲೆ ನಡೆಯುತ್ತಿರುವ ದಾಳಿಯನ್ನು ತಡೆಯಲೇಬೇಕಿದೆ.

ಅಭಿವೃದ್ಧಿಯೆಂದರೆ ಏನು? ಕಾಡಿನೊಳಗೆ ರಸ್ತೆ



